ಹೇಮಾವತಿ ಎಡದಂಡೆ ನಾಲೆ.

380-ಶ್ರೀ ಎಸ್. ಶಫಿ ಅಹ್ಮದ್ (ತುಮಕೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ಎಡದಂತೆ ನಾಲೆಯ ಕೆಲಸದ ಈಗಿನ ಹಂತ ;

ಆ) ನಾಲೆಯ ಕೆಲಸಗಳಿಗೆ ಅನುದಾನ ಒದಗಿಸಿರುವ ವಿವರಗಳು ಹಾಗೂ ಈವರೆಗೆ ಖರ್ಚು ಮಾಡಿರುವ ಮೊತ್ತ;

ಇ) ಅಡ್ಡ ಮೋರಿಗಳ ಕೆಲಸಗಳನ್ನು (ಸಿ.ಡಿ.ವರ್ಕ್ಸ್) ಹಾಗೂ ವಿತರಣಾ ನಾಲೆಗಳ ಕೆಲಸಗಳನ್ನು ಒಟ್ಟಿಗೆ ತೆಗೆದುಕೊಳ್ಳಲಾಗಿದೆಯೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು):

ಅ) ಕೆಲವು ಅಡ್ಡ ಮೋರಿಗಳ (ಸಿ.ಡಿ.) ಕೆಲಸಗಳು ಹಾಗೂ ನಾಲೆಯ ಲೈನಿಂಗ್ ಕೆಲಸಗಳ ಹೊರತಾಗಿ ನಾಲೆಯ ಕೆಲಸವು ಮುಗಿದಿರುತ್ತದೆ. ಡಿಸ್ಟ್ರಿಬ್ಯೂಟರಿ ಸಂಖ್ಯೆ 70 ರಿಂದ 72ರ ಕಾಮಗಾರಿಗಳು ವಿವಿಧ ಹಂತದಲ್ಲಿವೆ. ಬಾಗೂರು ನವಿಲೆ ಸುರಂಗದ ನಂತರದ "ವೈ" ಅಲೈನ್‌ಮೆಂಟಿನ ಸೀಳು ಆಳ ನಾಲೆ (ಡೀಪ್‌ಕಟ್ ಕೆನಾಲ್) ಕೆಲಸವು ನಡೆಯುತ್ತಿದ್ದು, ಡಿಸೆಂಬರ್ 93ರೊಳಗೆ ಪೂರ್ಣಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆ) ತುಮಕೂರು ಬ್ರ್ಯಾಂಚ್ ಕೆನಾಲ್ 131ನೇ ಕಿ.ಮೀ. ವರೆಗಿನ ಬೇರೆ ಬೇರೆ ರೀಚ್‌ಗಳ ಕೆಲಸಗಳು ಪ್ರಗತಿಯಲ್ಲಿವೆ. 132 ರಿಂದ 151 ಕಿ.ಮೀ. ವರೆಗಿನ ರೀಚ್‌ನ ಸಮೀಕ್ಷೆ ಕೆಲಸವು ಪ್ರಗತಿಯಲ್ಲಿದೆ. ನಾಗಮಂಗಲ ಬ್ರ್ಯಾಂಚ್ ಕೆನಾಲ್‌ನ 67ನೇ ಕಿ.ಮೀ. ವರೆಗಿನ ಕೆಲಸವು ಪ್ರಗತಿಯಲ್ಲಲ್ಲದೆ. ಮತ್ತು 67ನೇ ಕಿ.ಮೀ. ನಂತರದ ಸಮೀಕ್ಷೆ ಕೆಲಸಗಳು ಪ್ರಗತಿಯಲ್ಲಿದೆ.

ಇ) ಹೇಮಾವತಿ ಯೋಜನೆಗೆ 1992-93ರ ಸಾಲಿಗೆ ರೂ. 90.00 ಕೋಟಿ ಅನುದಾನ ಒದಗಿಸಲಾಗಿದೆ. ನವೆಂಬರ್ 92ರವರೆಗೆ ರೂ. 45. 86 ಕೋಟಿಗಳನ್ನು ಖರ್ಚು ಮಾಡಲಾಗಿದೆ.

ಹೌದು.

ಬಾಗೂರು ನವಲೆ ಸುರಂಗದ ಕೆಲಸಗಳು.

380 ಎ-ಶ್ರೀ ಎಸ್. ಶಫಿ ಅಹಮದ್ (ತುಮಕೂರು): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೂರು ನವಿಲೆ ಸುರಂಗದ ಕೆಲಸಗಳು ಯಾವಾಗ ಪೂರ್ಣಗೊಳ್ಳುವುದು? ಮತ್ತು ಪ್ರಸ್ತುತ ಪ್ರಗತಿಯ ಬಗ್ಗೆ ಮಾಹಿತಿ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಬಾಗೂರು ನವಿಲೆ ಸುರಂಗದ ಕೆಲಸ ಪೂರ್ಣಗೊಂಡಿದೆ.

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಕರಡಿಲಕ್ಕನಕೆರೆಯ ಏತ ನೀರಾವರಿ ಯೋಜನೆ.

453 - ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾ ಪಟ್ಟಣ ತಾಲ್ಲೂಕಿನ ಹಾರಂಗಿ ಯೋಜನೆಯ ಅಡಿಯಲ್ಲಿ ಬರುವ ಕರಡಿಲಕ್ಕನಕೆರೆಯ ಏತ ನೀರಾವರಿ ಕಾಲುವೆ ಕೆಲಸ ಈವರೆಗೆ ಎಷ್ಟು ಕಿ.ಮೀ. ಆಗಿರುತ್ತದೆ?

ಅ) ಈ ವರ್ಷದಲ್ಲಿ ಎಷ್ಟು ಕಿ.ಮೀ. ಕೆಲಸ ಮಾಡಲಾಗುತ್ತದೆ?

ಇ) ಈ ಯೋಜನೆಗೆ ಸಂಬಂಧಪಟ್ಟಂತೆ ವಿದ್ಯುಚ್ಛಕ್ತಿ ಮತ್ತು ಟ್ರಾನ್ಸ್‌ಫಾರ್ಮರ್ ಬಗ್ಗೆ ಏನೇನು ಕ್ರಮ ಕೈಗೊಂಡಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಅ) ಕಾಲುವೆಯ 4 ಕಿ.ಮೀ. ಉದ್ದದ ಕೆಲಸಗಳು ಭಾಗಶಃ ಆಗಿರುತ್ತದೆ.

ಆ) ಈ ವರ್ಷದಲ್ಲಿ ಪ್ರಾರಂಭಿಸಿದ 10 ಕಿ.ಮೀ. ಉದ್ದ ಕಾಲುವೆಯ ಕೆಲಸಗಳನ್ನು ಮಾಡುವ ಕಾರ್ಯಕ್ರಮವಿದೆ.

ಇ) ಈ ಯೋಜನೆಗೆ ಬೇಕಾಗುವ ವಿದ್ಯುಚ್ಛಕ್ತಿ ಸರಬರಾಜಿಗೆ ಠೇವಣಿ ಹಣ ಪಾವತಿ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯೊಂದಿಗೆ ಪತ್ರ ವ್ಯವಹಾರ ನಡೆಸಲಾಗುತ್ತಿದೆ. ಪಂಪುಗಳು ಮತ್ತು ಟ್ರಾನ್ಸ್‌ಫಾರ್ಮರ್‌ಗಳನ್ನೊಳಗೊಂಡ ಹೆಡ್‌ವರ್ಕ್ಸ್ ಕೆಲಸಗಳಿಗಾಗಿ 16.26 ಕೋಟಿ. ರೂ. ಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಮೈಸೂರು ಜಿಲ್ಲೆಗೆ ಸಣ್ಣ ಮತ್ತು ದೊಡ್ಡ ಕೈಗಾರಿಕೆಗಳಿಗಾಗಿ ಸಬ್ಸಿಡಿ ಹಣ ಮಂಜೂರು.

452-ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91 ಮತ್ತು 1991-92ನೇ ಸಾಲುಗಳಲ್ಲಿ ಮೈಸೂರು ಜಿಲ್ಲೆಗೆ ಸಣ್ಣ ಮತ್ತು ದೊಡ್ಡ ಕೈಗಾರಿಕೆಗಳಿಗಾಗಿ ಎಷ್ಟು ಸಬ್ಸಿಡಿ ಹಣ ಮಂಜೂರು ಆಗಿದೆ?

ಆ) ಅದರಲ್ಲಿ 1990-91ನೇ ಹಾಗೂ 1991-92ರಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಇ) ಇನ್ನೂ ಎಷ್ಟು ಹಣ ಬಿಡುಗಡೆ ಮಾಡಬೇಕಾಗಿದೆ?

ಈ) ಈ ವಿತರಣೆಯನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) 1990-91 : ರೂ. 41.60 ಲಕ್ಷಗಳು

1991-92 : ರೂ. 196.19 ಲಕ್ಷಗಳು

ಆ) 1990-91ನೇ ಸಾಲಿಗೆ ಸಂಬಂಧಿಸಿದಂತೆ ರೂ. 4010050.00ಗಳ ಸಹಾಯಧನವನ್ನು 14 ಘಟಕಗಳಿಗೆ ಬಿಡುಗಡೆ ಮಾಡಲಾಗಿದೆ. 1991-92ನೇ ಸಾಲಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಬಿಡುಗಡೆ ಮಾಡಿರುವುದಿಲ್ಲ.

ಇ) 1990-91ನೇ ಸಾಲಿಗೆ ರೂ. 149950.00 ಗಳಿಗೆ (2 ಘಟಕಗಳಿಗೆ) ಮತ್ತು 1991-92 ನೇ ಸಾಲಿಗೆ ರೂ. 196.19 ಲಕ್ಷಗಳ (113 ಘಟಕಗಳಿಗೆ) ರಾಜ್ಯ ಸಹಾಯಧನವನ್ನಾಗಿ ಬಿಡುಗಡೆ ಮಾಡಬೇಕಾಗಿದೆ.

ಈ) ಕೆಲವು ವಿಶೇಷ ಸಂದರ್ಭಗಳನ್ನು ಬಿಟ್ಟು ಇಲಾಖೆಯಿಂದ ಸಹಾಯಧನ ಮಂಜೂರಾತಿ ಪಡೆದ ದಿನಾಂಕವನ್ನು ಆಧಾರವನ್ನಾಗಿಟ್ಟುಕೊಂಡು ಹಣವನ್ನು ಬಿಡುಗಡೆ ಮಾಡಲಾಗುತ್ತದೆ.